ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 01.12.2025.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಹೆಚ್ ಎನ್ ಕೆ ವಕೀಲರಿಂದಃ

ನಾನು ಪಿ ಹೆಚ್ ಡಿ ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ಈ ದಾವೆಯನ್ನು ಪ್ರತಿವಾದಿ ಮತ್ತು ಅವರ ಮಗಳಾದ ಮುನಿಯಮ್ಮ ರವರ ವಿರುದ್ಧ ಸಲ್ಲಿಸಿದ್ದೇನೆ. ಪ್ರತಿವಾದಿ ದಾವಾ ಸ್ವತ್ತಿಗೆ ತೊಂದರೆ ಕೊಟ್ಟಿದ್ದರಿಂದ ಈ ದಾವೆ ಸಲ್ಲಿಸಿದ್ದೇನೆ. ದಾವಾ ಸ್ವತ್ತಿಗೆ ಪ್ರತಿವಾದಿ ಸುಮಾರು 30 ವರ್ಷಗಳಿಂದ ತೊಂದರೆ ಕೊಡುತ್ತಿದ್ದಾರೆ. ಈ ದಾವೆಗೆ ಸಂಬಂಧಿಸಿದಂತೆ ದಿ 10.12.2020 ರಂದು ತೊಂದರೆ ನೀಡಿರುತ್ತಾರೆ. 30 ವರ್ಷಗಳಿಂದ ಪ್ರತಿವಾದಿ ವಿರುದ್ಧ ಪೋಲೀಸ್ ಠಾಣೆಗೆ ದೂರು ನೀಡಿರುತ್ತೇವೆ ಮತ್ತು ಈ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ಬೇರೆ ಬೇರೆ ದಾವೆಗಳು ನಡೆದಿರುತ್ತವೆಂದು ನುಡಿಯುತ್ತಾರೆ.

2. ದಿಃ 10.12.2020 ರಂದು ನಾನು ಪ್ರತಿವಾದಿ ವಿರುದ್ಧ ದಾವಾ ಸ್ವತ್ತಿಗೆ ತೊಂದರೆ ಕೊಟ್ಟ ಸಂಬಂಧ ದೂರು ನೀಡಿರುತ್ತೇನೆ. ಆ ದಿನ ನನ್ನನ್ನು ಪ್ರತಿವಾದಿಯನ್ನು ಠಾಣೆಗೆ ಪೋಲೀಸರು ಕರೆಸಿದ್ದು, ಸಿವಿಲ್ ಸ್ವರೂಪದ ಪ್ರಕರಣವೆಂದು ನಮ್ಮನ್ನು ವಾಪಸ್ಸು ಕಳುಹಿಸಿರುತ್ತಾರೆ. ಈ ಸಂಬಂದ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

3. ದಾವಾ ಸ್ವತ್ತು ಮೂಲತಃ ನಾರಾಯಣಪ್ಪ ರವರಿಗೆ ಮಂಜೂರಾಗಿದ್ದು, ಅವರು ಮೃತಪಟ್ಟ ನಂತರ ಪ್ರತಿವಾದಿಗೆ ಫವತಿ ಖಾತೆ ಆಗಿರುತ್ತದೆ. ಪ್ರತಿವಾದಿ ಹೆಸರಿಗೆ ಫವತಿ ಖಾತೆ ಆಗುವ ಕಾಲದಲ್ಲಿ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. ನಾರಾಯಣಪ್ಪನ ಹೆಸರಿನಿಂದ ಪ್ರತಿವಾದಿ ಹೆಸರಿಗೆ ಫವತಿ ಖಾತೆ ಆಗುವ ಕಾಲಕ್ಕೆ ನಾವು ತಕರಾರು ಸಲ್ಲಿಸಿದ್ದೇವೆ. ನಾರಾಯಣಪ್ಪ ರವರಿಗೆ ದಾವಾ ಸ್ವತ್ತಾದ 03 ಎಕರೆ 03 ಗುಂಟೆ ಜಮೀನು ಸರ್ಕಾರದಿಂದ ಮಂಜೂರಾಗಿರುತ್ತದೆ. ದಾವಾ ಸ್ವತ್ತಾದ 03 ಎಕರೆ 03 ಗುಂಟೆ ಜಮೀನಲ್ಲಿ ಪ್ರತಿವಾದಿಯ ಗಂಡನಾದ ನಾರಾಯಣಪ್ಪರವರು ಸಂಪೂರ್ಣ ವಿಸ್ತೀರ್ಣದಲ್ಲಿ ಸ್ವಾಧೀನಾನುಭವದಲ್ಲಿ ಇರಲಿಲ್ಲ, ನಾವು 01 ಎಕರೆ ವಿಸ್ತೀರ್ಣದಲ್ಲಿ ಸ್ವಾಧೀನಾನುಭವದಲ್ಲಿರುತ್ತೇವೆ. ಸದರಿ 01 ಎಕರೆ ಜಮೀನು ನಮಗೆ ಮಂಜೂರಾಗಿರುತ್ತದೆ. ಸದರಿ 01 ಎಕರೆ ಜಮೀನು ನಮಗೆ ಮಂಜೂರಾಗಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಸ್ವಾದೀನಾನುಭವದಲ್ಲಿರುವ 01 ಎಕರೆ ಜಮೀನಿಗೆ ಚಕ್ಕುಬಂದಿ

ಪೂರ್ವಕ್ಕೆಪ್ರತಿವಾದಿಯ ಜಮೀನು.

ಪಶ್ಚಿಮಕ್ಕೆ ನಮ್ಮ ಸ್ವಂತ ಜಮೀನು.

ಉತ್ತರಕ್ಕೆ ರಸ್ತೆ,

ದಕ್ಷಿಣಕ್ಕೆ ಸಣ್ಣ ಕಾಲುವೆ.

4. ನನ್ನ ವಾದ ಪತ್ರದಲ್ಲಿ ಈಗ ಮೇಲೆ ಹೇಳಿರುವ 01 ಎಕರೆ ಜಮೀನು ನಮಗೆ ಮಂಜೂರಾಗಿರುತ್ತದೆಂದು ಹೇಳಿರುತ್ತೇನೆ. ನನ್ನ ವಾದ ಪತ್ರದಲ್ಲಾಗಲೀ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ದಾವಾ ಸರ್ವೇ ನಂಬರಿನಲ್ಲಿ 01 ಎಕರೆ ಜಮೀನು ಮಂಜೂರಾಗಿರುತ್ತದೆಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ದಾವಾ ಸ್ವತ್ತು ಮಂಜೂರಾತಿ ಮತ್ತು ಕ್ರಯ ಪತ್ರದ ಮೂಲಕ ಬಂದಿರುತ್ತದೆಂದು ಹೇಳಿರುತ್ತೇನೆ. ನಮಗೆ ಕ್ರಯ ಪತ್ರದ ಮೂಲಕ ದಾವಾ ಸರ್ವೇ ನಂಬರಿನಲ್ಲಿ 01 ಎಕರೆ ಜಮೀನು ಬಂದಿರುತ್ತದೆ. ನಾನು ಪ್ಯಾರ 3 ರಲ್ಲಿ ಹೇಳಿರುವ ಚಕ್ಕುಬಂದಿ ಸ್ವತ್ತು ನಿ.ಪಿ.1 ಕ್ರಯ ಪತ್ರದ ಮೂಲಕ ಬಂದಿರುವ ಸ್ವತ್ತಿನ ಚಕ್ಕುಬಂದಿ ಆಗಿರುತ್ತದೆ. ಸದರಿ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸದರಿ ನಿ.ಪಿ.1 ಕ್ರಯ ಪತ್ರದಲ್ಲಿ 01 ಎಕರೆ ವಿಸ್ತೀರ್ಣದ ಬಗ್ಗೆ ನಮೂದು ಇರುತ್ತದೆ. ನಿ.ಪಿ.1 ಮತ್ತು 2 ಕ್ರಯ ಪತ್ರಗಳಲ್ಲಿ ಗಜದ ರೂಪದಲ್ಲಿ ವಿಸ್ತೀರ್ಣವನ್ನು ನಮೂದಿಸಿದೆ. ನಿ.ಪಿ.1 ಮತ್ತು 2 ಕ್ರಯ ಪತ್ರಗಳಲ್ಲಿನ ಚಕ್ಕುಬಂದಿ ಮತ್ತು ನಾನು ವಾದ ಪತ್ರದಲ್ಲಿ ಹೇಳಿರುವ ಚಕ್ಕುಬಂದಿ ಬೇರೆ ಬೇರೆ ಎಂದರೆ ಸರಿಯಲ್ಲ. ನಿ.ಪಿ.1 ಕ್ರಯ ಪತ್ರದ ಅನುಸೂಚಿ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 28 ಗಜಗಳು, ಉತ್ತರ ದಕ್ಷಿಣ 94 ಗಜಗಳಾಗಿರುತ್ತವೆ.

5. ನಿ.ಪಿ.2 ರ ಕ್ರಯ ಪತ್ರದ ಅನುಸೂಚಿ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 5 ಗಜ ಉತ್ತರ ದಕ್ಷಿಣ 95 ಗಜಗಳಾಗಿರುತ್ತವೆ. ನಿ.ಪಿ.1 ಮತ್ತು 2 ಕ್ರಯ ಪತ್ರಗಳ ಅನುಸೂಚಿಯಲ್ಲಿ ನಮೂದಿಸಿರುವ ಚಕ್ಕುಬಂದಿಯನ್ನು ನೀಡದೇ ಸುಳ್ಳು ಚಕ್ಕುಬಂದಿಯನ್ನು ವಾದಪತ್ರದಲ್ಲಿ ನಮೂದಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ಕ್ರಯ ಪತ್ರಗಳಂತೆ ಖಾತೆ ನಮ್ಮ ಹೆಸರಿಗೆ ಆಗಿರುತ್ತದೆ. ನಿ.ಪಿ.1 ಮತ್ತು 2 ಕ್ರಯ ಪತ್ರಗಳಂತೆ ಕಂದಾಯ ದಾಖಲಾತಿಗಳು ನನ್ನ ಹೆಸರಿಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ಕ್ರಯ ಪತ್ರಗಳಲ್ಲಿ ನಮೂದಿಸಿರುವ ಗಜಗಳ ವಿಸ್ತೀರ್ಣವನ್ನು ಒಟ್ಟುಗೂಡಿಸಿದರೆ ಒಟ್ಟು 20 ಗುಂಟೆ ಆಗುತ್ತದೆಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿಯಲ್ಲ.

6. ಸಾಕಿಗೆ ಒಂದು ಪಹಣಿಯನ್ನುತ್ತೋರಿಸಲಾಗಿ ಸದರಿ ಪಹಣಿಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು ನಿ.ಡಿ.15 ಎಂದು ಗುರುತಿಸಲಾಯಿತು. ನಿ.ಡಿ.15 ರ ಕಲಂ 11 ರಲ್ಲಿ

ನಮೂದು ಇರುವ ಮುದ್ದಪ್ಪ ಬಿನ್ ಕೊಂಡಪ್ಪ ನನ್ನ ತಂದೆ ಎಂದರೆ ಸರಿ. ನಿ.ಡಿ.15 ರಲ್ಲಿ ಮುದ್ದಪ್ಪ ರವರನ್ನು ಬಲತ್ಕಾರವಾಗಿ ಹೊರದೂಡಿದೆ ಎಂದು ನಮೂದು ಇದೆ ಎಂದರೆ ಸರಿ. ನಿ.ಪಿ.5 ರಿಂದ 14 ಪ್ರತಿವಾದಿಗಳು ಕಟಾವು ಮಾಡುತ್ತಿರುವ ನೀಲಗಿರಿ ಮರದ ಭಾವಚಿತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ನಿ.ಪಿ.5 ರಿಂದ 14 ಭಾವ ಚಿತ್ರಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರು ಪಡಿರುತ್ತೇನೆಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾರಿಗಳೊಂದಿಗೆ ಶರೀಕಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನಾನುಭವದಲ್ಲಿ ಇರವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.